ದಕ್ಷಿಣ ಕನ್ನಡದಲ್ಲಿ ತೆಂಗಿನ ಮರಗಳಿಗೆ ಕಪ್ಪುತಲೆ ಹುಳುಗಳ ಹಾವಳಿ

526 (83) ಶ್ರೀ ಬಿ. ಎಂ. ಇದಿನಬ್ಬ:- (ಉಳ್ಳಾಲ) ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ತೆಂಗಿನ ಮರಗಳಿಗೆ ಕಪ್ಪುತಲೆ ಹುಳುಗಳಿಂದ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಕಪ್ಪುತಲೆ ಹುಳುಗಳಿಂದ 89-90ಮತ್ತು 90-91ಡಿಸೆಂಬರ್ ಅಂತ್ಯದವರೆಗೆ ಎಲ್ಲೆಲ್ಲಿ ಹಾನಿಯಾಗಿದೆ ಹಾಗೂ ಎಷ್ಟು ಮರಗಳು ಎಲ್ಲೆಲ್ಲಿ ಹಾನಿಗೊಂಡಿವೆ.

ಇ) ಇದರಿಂದ ಎಷ್ಟು ಕೃಷಿಕರಿಗೆ ನಷ್ಟ ಉಂಟಾಗಿದೆ (ಕೃಷಿಕರ ಹೆಸರು ಸ್ಥಳದ ಹೆಸರು ನೀಡುವುದು)

ಈ) ರೋಗವನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)

ಅ) ಬಂದಿರುತ್ತದೆ.

ಆ)

ಹಾನಿಗೊಳಗಾದ ತಾಲ್ಲೂಕು	ಹಾನಿಗೊಳಗಾದ ಮರಗಳ ಸಂಖ್ಯೆ 89-90	90-91
ಕುಂದಾಪ್ರ ಮಂಗಳೂರು ಉಡುಪಿ	93-30	35981

ಇ) ನಷ್ಟ ಉಂಟಾದ ಬಗ್ಗೆ ಯಾವುದೇ ವಿವರಗಳು ಬಂದಿರುವುದಿಲ್ಲ.

ಈ) ಈ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ವತಿಯಿಂದ 3 ಕಿರು ಪ್ರಯೋಗಾಲಯಗಳು ಮತ್ತು ಒಂದು ಹಿರಿಯ ಪ್ರಮಾಣದ ಪ್ರಯೋಗಾಲಯಗಳನ್ನು ಸ್ಥಾಪಿಸಿದ್ದು, ವಾರ್ಷಿಕ ಪರೋಪ ಜೀವಿ ಉತ್ಪಾದನಾ ಗುರಿ 4.25 ಲಕ್ಷ ಇದ್ದು ಈವರೆವಿಗೆ ಗುರೀ ಮೀರಿ ಅಂದರೆ 14.12 ಲಕ್ಷ ಪರೋಪ ಜೀವಿಗಳನ್ನು ಉತ್ಪಾದನೆ ಮಾಡಿ ಹಾನಿಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

ಇದಲ್ಲದೆ ತೆಂಗು ಅಭಿವೃದ್ಧಿ ಮಂಡಳಿವತಿಯಿಂದ ಉಡುಪಿಯಲ್ಲಿ ಒಂದು ಬೃಹತ್ ಪ್ರಮಾಣ ಪ್ರಯೋಗಾಲಯ ಸ್ಥಾಪನೆ ಮಾಡಿದ್ದು ಇದರ ವಾರ್ಷಿಕ ಉತ್ಪಾದನೆ ಗುರಿ 10 ಲಕ್ಷ ನಿಗದಿಪಡಿಸಿದ್ದು ಈವರೆವಿಗೂ 60,000 ಪರೋಪಜೀವಿಗಳನ್ನು ಉತ್ಪಾದನೆ ಮಾಡಿ ಕೀಟದ ಬಾಧೆಗೊಳಗಾದ ರೈತರ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

ಧಾರವಾಡ ಜಿಲ್ಲಾ ಮೆಣಸಿನಕಾಯಿ ಬೆಳೆಗಾರರ ಹಾಗೂ ಕೃಷಿಕರ ಹಿತಾಸಕ್ತಿಯ ಬಗ್ಗೆ

528 (113) ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ:- (ಕುಂದಗೋಳ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆ ಮೆಣಸಿನಕಾಯಿ ಬೆಳೆಗಾರರ ಹಾಗೂ ಕೃಷಿಕರ ಹಿತಾಸಕ್ತಿ ಗಮನಿಸಿ ಮೆಣಸಿನಕಾಯಿ ಬೆಳೆಗಾರರ ಬೋರ್ಡ್ ಸ್ಥಾಪನೆ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಸ್ಥಾಪನೆ ಮಾಡಲಾಗುವುದು?